# ಎಲೆ ಎಲೆ ಸಿಡಿಲೆ ಮಿಂಚೆ ಗರ್ಜಿಸದಿರಿ ನೀವು

(ಬಾಲಲೀಲಾ ಸುಳಾದಿ)

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 11.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 128.
3. **Note:** Lyrics mentioned here are as per Ref. 1. The wordings in Ref. 2 are same as in Ref. 1.

**ಧ್ರುವ ತಾಳ**

ಎಲೆ ಎಲೆ ಸಿಡಿಲೆ, ಮಿಂಚೆ, ಗರ್ಜಿಸದಿರಿ ನೀವು
ಎಲೆ ಎಲೆ ಮೇಘರಾಜಾ, ಮಳೆಗರೆಯದಿರು
ಎಲೆ ಎಲೆ ಭೂದೇವಿ, ನವರತುನಗಳಿಂದ
ನೆಲೆಕಟ್ಟಿ ಕಟ್ಟಿಕೊಂಡು ಥಳಥಳಿಸುತಲಿರು
ಹುಲಿಯುಗುರ ಅರಳೆಲೆ ಮಾಗಾಯಿ ಕಂಕಣ
ಘಲು ಘಲು ಘಲುಕೆಂಬ ಕಾಲಪೆಂಡೆಯನಿಟ್ಟು
ಬಲರಾಮ ಪುರಂದರ ವಿಠಲ ಗೋಪಾಲಕೃಷ್ಣ
ನಲಿಯುತ ಅಂಬೆಗಾಲನಿಕ್ಕುತ ಬರುತಾರೆ ॥ ೧ ॥

**ಮಟ್ಟ ತಾಳ**

ಮಲ್ಲಿಗೆ ಮೊಗ್ಗೆಗಳಂತೆ ಹಲ್ಲು ಬಂದಿವೆ ಸಿರಿಕೃಷ್ಣಯ್ಯಗೆ
ಎಲ್ಲಿ ಎಲ್ಲಿ ಬಾಯ ತೆರೆಯೊ ಎನೆ
ಎಲ್ಲ ಬೊಮ್ಮಾಂಡವ ಕಂಡೆ

ಎಲ್ಲರಂಥ ಕಂದನಲ್ಲಿವ
ಬಲ್ಲವರಿಗೆ ಪುರಂದರ ವಿಠಲನು
ಜಗದ ಪಾಲಕನು,,,,,,,ಹಲ್ಲು ಬಂದಿವೆ ॥ ೨ ॥

**ತ್ರಿವಿಡೆ ತಾಳ**

ಬೆಣ್ಣೆಯ ಬಟ್ಟಲವ ತೊಡೆಯ ಮೇಲಿಟ್ಟುಕೊಂಡು
ಅಣ್ಣ ಬಲರಾಮನ ಕೂಡಿಕೊಂಡು
ಚೆನ್ನಾಗಿ ಡೊಗ್ಗಾಲೂರಿ ಮೆಲ್ಲುವ ಕೃಷ್ಣ
ಕಣ್ಣು ಬಿಡುವನೇನೆ ಕೇಳೆ ಗೋಪೀದೇವಿ
ಸಣ್ಣವನೇನ ಪುರಂದರ ವಿಠಲ ॥ ೩ ॥

**ಆದಿ ತಾಳ**

ಇದೆ ಇದೆ ಕೈಬೆಣ್ಣೆ, ಇದೊ ಅಂಗೈ ಸಿಕ್ಕಿತು
ಇದೆ ಇದೆ ಕಟಬಾಯಿ ಇದೇ ಸುರಿಯುವ ಬೆಣ್ಣೆ
ಇದೆ ಇದೆ ಗೋಪೀದೇವಿ ನಿನ್ನ ಮಗನು ಕಳ್ಳ
ಇದೆ ಇದೆ ಹಿಡಿದು ತಂದೆವು ನೋಡೇ
ಹದುಳದಿಂದಿಡೆ ಲೇಸು ಇಲ್ಲದಿದ್ದರೆ ನಿನ್ನ
ತದುಕಿ ಬಿಡುವೆನಯ್ಯ ಪುರಂದರ ವಿಠಲ ॥ ೪ ॥

**ರೂಪಕ ತಾಳ**

ನೀಲಮೇಘಶ್ಯಾಮ ಕೋಮಲನೆ

ಹಾಲು ಕುಡಿಯ ಬಾರೊ ಹಸಿದೆಯಾ ರಂಗಯ್ಯ

ಹಾಲು ಮೊಸರು ಬೆಣ್ಣೆ ಹಾವಳಿಗಾರೆನೊ

ಶ್ರೀಲೋಲ ಪುರಂದರ ವಿಠಲ ಗೋಪಾಲಕೃಷ್ಣ ॥ ೫ ॥

**ಜತೆ**

ಅನುದಿನ ಬಾಲ ಗೋಪಾಲಕೃಷ್ಣನೇ ನಿನ್ನ

ನೆನೆವಂತೆ ಮಾಡೆನ್ನ ಪುರಂದರ ವಿಠಲ ॥ ೬ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಸುಳಾದಿಯಲ್ಲಿ ದಾಸರು ಶ್ರೀ ಕೃಷ್ಣನ ಬಲ ರೂಪವನ್ನು ಕಂಡವರಾಗಿ, ಆ ರೂಪವು ಅಳಿಸಿ ಹೋಗದಂತೆ ಯಾವ ನೈಸರ್ಗಿಕ ವಿಕೃತಿಯೂ ಉಂಟಾಗಬಾರದೆಂದು ಬೇರೆ ಬೇರೆ ನೈಸರ್ಗಿಕ ಶಕ್ತಿಗಳಿಗೆ ಎಚ್ಚರ ಕೊಟ್ಟಿದ್ದಾರೆ.

೧. **ನೆಲಕಟ್ಟು** = ಸಮನಾದ ನೆಲ

೩. **ಡೊಗ್ಗಾಲು** = ಊರಿದ ಮೊಣಕಾಲು

೪. **ಹದುಳ** = ಕ್ಷೇಮ

**ತದುಕು** = ಬಲವಾಗಿ ಹೊಡೆ

೫. **ಆರೆನು** = ಅಸಮರ್ಥಳು

**Classification:** Suladi
**Name of Suladi:** Bala Leela Suladi
**Ankita:** purandara vittala
**Location:** NA
**Category:** Krishna Leele

**Sub-Category:** bhumi, devi, ratna, Balarama, Gopala, Krishna, mallige, bayi, brahmanda, koosu, loka, benne, kannu, gopi, kai, kalla, maga, tande, halu,

**Pravachana:** NA

**Explanation:** NA